# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ</u>

ಎಸ್‌ಸಿ ನಂ. 56/2022

ಸಿಡಬ್ಲು: 29 / ಪಿಡಬ್ಲು: 18

ದಿನಾಂಕ: 21.03.2025

<u>ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.</u>

| | | |
|---|---|---|
| ಸಾಕ್ಷಿದಾರರ ಹೆಸರು | : | ಸುನೀಲ ಸವದಿ |
| ತಂದೆಯ ಹೆಸರು | : | ಅಣ್ಣಪ್ಪ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಸಿಪಿಐ ಹುನಗುಂದ ವೃತ್ತ |
| ವಾಸ ಸ್ಥಳ | : | ಹುನಗುಂದ |

(<u>ಸಾಕ್ಷಿಯು ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷ್ಯವನ್ನು ನುಡಿದಿರುತ್ತಾರೆ.</u>)

ಹುನಗುಂದ ಸಿಪಿಐ ವೃತ್ತ ಕಚೇರಿಯ ಕ್ವಾಲಿಟಿ ಕಂಟ್ರೋಲ್ ಕಚೇರಿಯಲ್ಲಿರುವ ವಿಡಿಯೋ ಕಾನ್ಫರೆನ್ಸ ಕೊಠಡಿಯಲ್ಲಿ ಸಾಕ್ಷಿದಾರರು ಹಾಜರಿದ್ದಾರೆ. ಶ್ರೀ ಜಿ.ಎ. ಪವಾರ, ಹೆಚ್.ಸಿ. 1193 ಇವರನ್ನು ರಿಮೋಟ್ ಪಾಯಿಂಟ್ ಕೊ-ಆರ್ಡಿನೇಟರ್ ಎಂದು ನೇಮಿಸಲಾಯಿತು. ವಿಡಿಯೋ ಕಾನ್ಫರೆನ್ಸ ಮೂಲಕ ಸಾಕ್ಷಿಯನ್ನು ದಾಖಲು ಮಾಡಿಕೊಳ್ಳಲಾಗುತ್ತಿದೆ. ವಿಡಿಯೋ ಸಂಪರ್ಕವನ್ನು ಗೂಗಲ್‌ಮೀಟ್ http://meet.google.com/mff-voxg-qao ಮೂಲಕ ಕಲ್ಪಿಸಿಕೊಳ್ಳಲಾಗಿದೆ. ನೆಟ್ ವರ್ಕನಲ್ಲಿ ಯಾವುದೇ ತೊಂದರೆ ಇಲ್ಲ. ಆರೋಪಿ ನ್ಯಾಯಾಲಯದ ವಿ.ಸಿ.ಯಲ್ಲಿ ಹಾಜರ ಇದ್ದು, ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ ಹಾಜರ ಇರುತ್ತಾರೆ. ಆಡಿಯೋ ಮತ್ತು ವಿಡಿಯೋ ಸ್ಪಷ್ಟವಾಗಿದೆ.

## <u>ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:</u>

1. ನಾನು ದಿನಾಂಕ: 02.06.2021 ರಿಂದ 22.08.2022 ರ ವರೆಗೆ ಪಿಐ ಎಂದು ಮುಂಡರಗಿ ಪೋಲೀಸ ಠಾಣೆಯಲ್ಲಿ ಕೆಲಸ ಮಾಡಿದ್ದೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ದಿ: 04.03.2022 ರಂದು, ರಾತ್ರಿ 10.00 ಗಂಟೆಗೆ ಅತ್ತಿಕಟ್ಟಿ ಗ್ರಾಮದಲ್ಲಿ ಸೋಮಲೆಪ್ಪ ನಾಯಕ ಇವರಿಗೆ ಚಾಕು ಚುಚ್ಚಿ ಕೊಲೆ ಮಾಡಲಾಗಿದೆ ಎಂದು ಮಾಹಿತಿ ಬಂದಿದ್ದು ಮತ್ತು ಸದ್ಯಕ್ಕೆ ಶವವು ಗದಗ ಜಿಲ್ಲಾ ಆಸ್ಪತ್ರೆಯಲ್ಲಿ ಇರುವುದಾಗಿ ಮಾಹಿತಿ ಬಂದ

ಮೇರೆಗೆ ನಾನು ತಕ್ಷಣ ಗದಗ ಜಿಲ್ಲಾ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ ಮೃತನ ಸಂಬಂಧಿಕರು ಯಾರೂ ಇಲ್ಲದ ಕಾರಣ ಅತ್ತಿಕಟ್ಟಿ ಗ್ರಾಮಕ್ಕೆ ಹೋಗಿ, ಬೆಳಗಿನ ಜಾವ 01.30 (05.03.2022) ಗಂಟೆಗೆ ಪ್ರಾಸಾ-1 ರವರಿಂದ ದಸ್ತೂರ ದೂರನ್ನು ಪಡೆದುಕೊಂಡಿರುತ್ತೇನೆ ಮತ್ತು ಮುಂಡರಗಿ ಠಾಣೆಗೆ ವಾಪಸ್ ಬಂದಿರುತ್ತೇನೆ.

3. ಸದರಿ ದೂರಿನ ಆಧಾರದ ಮೇಲೆ ಠಾಣಾ ಗುನ್ನಾ ನಂ. 47/2022 ಕಲಂ 302 ಐಪಿಸಿ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ಮೂಲ ದೂರನ್ನು ಹಾಗೂ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತೇನೆ.

4. ಈಗ ದೂರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-1(ಬಿ) ಎಂದು ಗುರುತಿಸಲಾಯಿತು.**

**5. ಈಗ ಪ್ರಥಮ ವರ್ತಮಾನ ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು.**

6. ನಂತರ ಅದೇ ದಿನ, ಪಿಸಿ 480 ರವರಿಗೆ ಘಟನಾ ಸ್ಥಳದ ಕಾವಲು ಕುರಿತು ನೇಮಿಸಿರುತ್ತೇನೆ ಮತ್ತು ಪ್ರಾಸಾ-12 ಮತ್ತು ಹೆಚ್.ಸಿ 961 ರವರನ್ನು ಆರೋಪಿಯನ್ನು ಪತ್ತೆ ಮಾಡಿಕೊಂಡು ಬರಲು ನೇಮಿಸಿರುತ್ತೇನೆ.

7. ನಂತರ ಅದೇ ದಿನ, ಗದಗ ಜಿಲ್ಲಾ ಆಸ್ಪತ್ರೆಗೆ ಬೇಟಿ ಕೊಟ್ಟಿದ್ದು, ಅಲ್ಲಿ ವಾರಸುದಾರರು ಬೇಗನೇ ಬರದ ಕಾರಣ ಪುನಃ ಅತ್ತಿಕಟ್ಟಿ ಗ್ರಾಮಕ್ಕೆ ಬೇಟಿ ಕೊಟ್ಟು, ಅಲ್ಲಿ ಪ್ರಾಸಾ-8 ರವರು ತೋರಿಸಿದ ಸ್ಥಳದಲ್ಲಿ ಪ್ರಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ 11.15 ರಿಂದ 12.15 ರ ವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-4 ರಂತೆ ಮಾಡಿರುತ್ತೇನೆ. **ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.** ಘಟನಾ ಸ್ಥಳದಿಂದ ಒಣಗಿದ ರಕ್ತವನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ರಕ್ತವನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅದನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ. 5 ಎಂದು ಗುರುತಿಸಲಾಗಿರುತ್ತದೆ. ನಿಪಿ-4 ರ ಕಾಲಕ್ಕೆ ನಿಪಿ-2 ಮತ್ತು 3 ರಂತೆ ಫೋಟೋಗಳನ್ನು ತೆಗೆಸಲಾಗಿರುತ್ತದೆ.

**8. ನಿಪಿ-4 ರ ಕಾಲಕ್ಕೆ ಸ್ಥಳದ ಕಚ್ಚಾ ನಕಾಶೆಯನ್ನು ತಯಾರಿಸಲಾಗಿರುತ್ತದೆ. ಈಗ ಸದರಿ ಕಚ್ಚಾ ನಕಾಶೆಯನ್ನು ನೋಡುತ್ತಿದ್ದು, ಅದನ್ನು ನಿಪಿ-30 ಎಂದು, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು.**

9. ನಂತರ ಅದೇ ದಿನ ಪ್ರಾಸಾ-8 ರವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ. ನಂತರ ಮೃತನ ಶವದ ಪಂಚನಾಮೆಯನ್ನು ನಿಪಿ-6 ರಂತೆ ಮದ್ಯಾಹ್ನ 01.00 ರಿಂದ 02.00 ರ ವರೆಗೆ

ಪ್ರಾಸಾ-3 ಮತ್ತು ಚಾಸಾ-4 ರವರ ಸಮಕ್ಷಮ ಗದಗ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮಾಡಿರುತ್ತೇನೆ. ಶವವನ್ನು ಪ್ರಾಸಾ-7 ರವರು ಗುರುತಿಸಿರುತ್ತಾರೆ. **ನಿಪಿ-6 ರ ಮೇಲಿರುವ ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-6(ಬಿ) ಎಂದು ಗುರುತಿಸಲಾಯಿತು.** ನಿಪಿ-6 ರ ಕಾಲಕ್ಕೆ ನಿಪಿ-7 ಮತ್ತು 8 ರಂತೆ ಫೋಟೋಗಳನ್ನು ತೆಗೆಸಲಾಗಿರುತ್ತದೆ.

10. ನಂತರ ಅದೇ ದಿನ, ಪ್ರಾಸಾ-7 ರವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ. ನಂತರ ಅದೇ ದಿನ ಸಿಬ್ಬಂದಿಯವರು ಆರೋಪಿಯನ್ನು ಹಿಡಿದುಕೊಂಡು ಬಂದು ನನ್ನ ಮುಂದೆ ಹಾಜರಪಡಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ವ್ಯಕ್ತಿಯಾಗಿರುತ್ತಾರೆ.

11. ನಂತರ ಆರೋಪಿಯನ್ನು ವಿಚಾರಿಸಲಾಗಿ ಆರೋಪಿಯು ಕೃತ್ಯ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದು, ಆತನನ್ನು ದಸ್ತಗಿರಿ ಮಾಡಿರುತ್ತೇನೆ ಮತ್ತು ಆತನ ಸ್ವ-ಖುಷಿ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ.

12. **ಈಗ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-31 ಎಂದು, ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಹಾಗೂ ಆರೋಪಿಯ ಸಹಿಯನ್ನು ನಿಪಿ-31(ಬಿ) ಎಂದು ಮತ್ತು ಸಂಬಂಧಿಸಿದ ನಮೂದನ್ನು ನಿಪಿ-31(ಸಿ) ಎಂದು ಗುರುತಿಸಲಾಯಿತು.**

13. ನಂತರ ಆರೋಪಿಯ ಸ್ವ-ಇಚ್ಛಾ ಹೇಳಿಕೆಯ ಪ್ರಕಾರ, ಆರೋಪಿಯು ಹೇಳಿದಂತೆ ನಾನು, ಪ್ರಾಸಾ-4 ಮತ್ತು ಚಾಸಾ-7 ಮತ್ತು ಸಿಬ್ಬಂದಿ ಹಾಗೂ ಆರೋಪಿ ಸೇರಿ ಬರದೂರ ಗ್ರಾಮಕ್ಕೆ ಹೋಗಿದ್ದು, ಅಲ್ಲಿ ಆರೋಪಿ ತೋರಿಸಿ, ಕೃತ್ಯಕ್ಕೆ ಉಪಯೋಗಿಸಿದ ಒಂದು ಚಾಕುವನ್ನು ಹಾಗೂ ಆರೋಪಿಯು ತನ್ನ ಸಂರಕ್ಷಣೆಗಾಗಿ ಇಟ್ಟುಕೊಂಡಿದ್ದ ಒಂದು ಮಚ್ಚನ್ನು ಹಾಜರಪಡಿಸಿರುತ್ತಾನೆ. ಸದರಿ ಚಾಕು ಹಾಗೂ ಮಚ್ಚನ್ನು ಪ್ರಾಸಾ-4 ಮತ್ತು ಚಾಸಾ-7 ರವರ ಸಮಕ್ಷಮ ಸಂಜೆ 04.15 ರಿಂದ 05.30 ರ ವರೆಗೆ ನಿಪಿ-9 ರಂತೆ ಪಂಚನಾಮೆ ಮಾಡಿ, ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಚಾಕು ಹಾಗೂ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.6 ಮತ್ತು 7 ಎಂದು ಗುರುತಿಸಲಾಗಿರುತ್ತದೆ. **ನಿಪಿ-9 ರ ಮೇಲಿರುವ ಸಾಕ್ಷಿಯ ಎರಡು ಸಹಿಗಳನ್ನು ಒಟ್ಟಾಗಿ ನಿಪಿ-9(ಬಿ) ಎಂದು ಗುರುತಿಸಲಾಯಿತು. ನಿಪಿ-9 ಕ್ಕೆ ಆರೋಪಿ ಕೂಡಾ ಸಹಿ ಮಾಡಿದ್ದು, ಆತನ ಸಹಿಯನ್ನು ನಿಪಿ-9(ಸಿ) ಎಂದು ಗುರುತಿಸಲಾಯಿತು.** ನಿಪಿ-9 ರ ಕಾಲಕ್ಕೆ ನಿಪಿ-12 ರಂತೆ ಫೋಟೋವನ್ನು ತೆಗೆಸಲಾಗಿರುತ್ತದೆ.

14. ನಂತರ ಅದೇ ದಿನ, ವಾಪಸ್ ಠಾಣೆಗೆ ಬಂದು, ಪಂಚರಾದ ಪ್ರಾಸಾ-4 ಮತ್ತು ಚಾಸಾ-7 ರವರ ಸಮಕ್ಷಮ ಆರೋಪಿಯು ಧರಿಸಿದ್ದ ರಕ್ತ ಹತ್ತಿದ ಶರ್ಟನ್ನು ನಿಪಿ-10 ರಂತೆ ಪಂಚನಾಮೆ ಮಾಡಿ

ಆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಈಗ ಆರೋಪಿಯ ಶರ್ಟನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.8 ಎಂದು ಗುರುತಿಸಲಾಗಿರುತ್ತದೆ. **ನಿಪಿ-10 ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.** ನಿಪಿ-10 ರ ಕಾಲಕ್ಕೆ ನಿಪಿ-13 ಮತ್ತು 14 ರಂತೆ ಫೋಟೋಗಳನ್ನು ತೆಗೆಸಲಾಗಿರುತ್ತದೆ.

14. ನಂತರ ಅದೇ ದಿನ, ಪಿಸಿ 520 ರವರು ಗದಗ ಜಿಲ್ಲಾ ಆಸ್ಪತ್ರೆಯಿಂದ ಮೃತನ ಮೈಮೇಲಿನ ಮೂರು ಬಟ್ಟೆಗಳನ್ನು ತಂದು ಹಾಜರಪಡಿಸಿದ್ದು, ಅವುಗಳನ್ನು ಪಂಚರಾದ ಪ್ರಾಸಾ-4 ಮತ್ತು ಚಾಸಾ-7 ರವರ ಸಮಕ್ಷಮ ರಾತ್ರಿ 09.45 ರಿಂದ 10.30 ರವರೆಗೆ ನಿಪಿ-11 ರಂತೆ ಪಂಚನಾಮೆ ಮಾಡಿ, ಆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಈಗ ಮೃತನ ಬಟ್ಟೆಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಮು.ಮಾ.2 ರಿಂದ 4 ಎಂದು ಗುರುತಿಸಲಾಗಿರುತ್ತದೆ. **ನಿಪಿ-11 ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-11(ಸಿ) ಎಂದು ಗುರುತಿಸಲಾಯಿತು.**

15. ನಂತರ ಅದೇ ದಿನ, ಚಾಸಾ-18, ಪ್ರಾಸಾ-9 ಮತ್ತು ಪ್ರಾಸಾ-12 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ.

16. ದಿಃ 06.03.2022 ರಂದು, ಪ್ರಾಸಾ-10 ರವರು ಘಟನೆ ಕಾಲಕ್ಕೆ ಆರೋಪಿಯ ಸೊಂಟದಲ್ಲಿದ್ದ ಒಂದು ಚೂರಿಯನ್ನು ಕಸಿದುಕೊಂಡಿದ್ದು ಅದನ್ನು ಅವರು ತಂದು ಠಾಣೆಯಲ್ಲಿ ಹಾಜರಪಡಿಸಿದ್ದು, ಅದನ್ನು ಪಂಚರಾದ ಚಾಸಾ-8 ಮತ್ತು ಪ್ರಾಸಾ-5 ರವರ ಸಮಕ್ಷಮ ಬೆಳಿಗ್ಗೆ 08.30 ರಿಂದ 09.15 ರ ರವರೆಗೆ ನಿಪಿ-16 ರಂತೆ ಪಂಚನಾಮೆ ಮಾಡಿ, ಆ ಮೂಲಕ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಚೂರಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸದರಿ ಚೂರಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ. **ನಿಪಿ-16 ರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-16(ಸಿ) ಎಂದು ಗುರುತಿಸಲಾಯಿತು.** ನಿಪಿ-16 ರ ಕಾಲಕ್ಕೆ ನಿಪಿ-17 ರಂತೆ ಫೋಟೋವನ್ನು ತೆಗೆಸಲಾಗಿರುತ್ತದೆ.

17. ನಂತರ ಅದೇ ದಿನ, ಚಾಸಾ-11, ಪ್ರಾಸಾ-11, 10, ಚಾಸಾ-12, ಪ್ರಾಸಾ-6 ಮತ್ತು 5 ರವರ ಹೇಳಿಕೆಗಳನ್ನು ತೆಗೆದುಕೊಂಡಿರುತ್ತೇನೆ. ನಂತರ ಅದೇ ದಿನ, ಪ್ರಾಸಾ-1 ರವರ ಮರು ಹೇಳಿಕೆಯನ್ನು ಕೂಡಾ ಪಡೆದುಕೊಂಡಿರುತ್ತೇನೆ.

18. ದಿಃ 08.03.2022 ರಂದು, ಘಟನಾ ಸ್ಥಳದ ನಕಾಶೆಯನ್ನು ತೆಗೆದು ಪೂರೈಸುವಂತೆ ಪಿಡಬ್ಲುಡಿ ರವರಿಗೆ ಮತ್ತು ಘಟನಾ ಸ್ಥಳದ ಉತಾರ ಪೂರೈಸುವಂತೆ ಪಿಡಿಓ ರವರಿಗೆ ಪತ್ರಗಳನ್ನು ಬರೆದಿರುತ್ತೇನೆ.

19. ದಿಃ 09.03.2022 ರಂದು, ಮೃತನ ಪಿ.ಎಂ. ವರದಿಯನ್ನು ಸಿಬ್ಬಂದಿಯವರು ತಂದು ಹಾಜರಪಡಿಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈಗ ಸದರಿ ಪಿ.ಎಂ. ವರದಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು.**

20. ದಿಃ **10.03.2022 ರಂದು, ಘಟನಾ ಸ್ಥಳದ ಉತಾರ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈಗ ಸದರಿ ಉತಾರ ನೋಡುತ್ತಿದ್ದು, ಅದನ್ನು ನಿಪಿ-32 ಎಂದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-32(ಎ) ಎಂದು ಗುರುತಿಸಲಾಯಿತು.**

21. ದಿಃ 11.03.2022 ರಂದು, ಜಪ್ತ ಮಾಡಿದ ವಸ್ತುಗಳನ್ನು ಆರ್.ಎಫ್.ಎಸ್.ಎಲ್. ಬೆಳಗಾವಿ ಗೆ ಪಿಸಿ 401 ರವರ ಮೂಲಕ ಪರೀಕ್ಷೆಗಾಗಿ ಕಳಿಸಿರುತ್ತೇನೆ.

22. ದಿಃ 14.03.2022 ರಂದು, ಚಾಸಾ-11, ಪ್ರಾಸಾ-11, 10, ಚಾಸಾ-12 ರವರ ಕಲಂ 164 ಸಿ.ಆರ್.ಪಿ.ಸಿ. ಅಡಿಯ ಹೇಳಿಕೆಯನ್ನು ಪಡೆಯಲು ನ್ಯಾಯಾಧೀಶರಿಗೆ ವಿನಂತಿ ಪತ್ರವನ್ನು ಬರೆದಿರುತ್ತೇನೆ.

23. ದಿಃ 17.03.2022 ರಂದು, ಚಾಸಾ-11, ಪ್ರಾಸಾ-11, 10, ಚಾಸಾ-12 ರವರ ಕಲಂ 164 ಸಿ.ಆರ್.ಪಿ.ಸಿ. ಅಡಿಯ ಹೇಳಿಕೆಯನ್ನು ದಾಖಲು ಮಾಡಿಸಿ, ನಂತರ ಅವುಗಳನ್ನು ಪಡೆಯಲಾಗಿರುತ್ತದೆ.

24. **ಈಗ ಸದರಿ ಚಾಸಾ-11, ಚಾಸಾ-12 ರವರ ಕಲಂ 164 ಸಿ.ಆರ್.ಪಿ.ಸಿ. ಅಡಿಯ ಹೇಳಿಕೆಗಳನ್ನು ನೋಡುತ್ತಿದ್ದು, ಅವುಗಳನ್ನು ಈಗ ನಿಪಿ-33 ಮತ್ತು 34 ಎಂದು ಗುರುತಿಸಲಾಯಿತು. ಅವುಗಳ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಗಳನ್ನು ನಿಪಿ-33(ಎ) ಮತ್ತು 34(ಎ) ಎಂದು ಗುರುತಿಸಲಾಯಿತು.**

25. ಈಗ ಸದರಿ ಪ್ರಾಸಾ-10 ರವರ ಕಲಂ 164 ಸಿ.ಆರ್.ಪಿ.ಸಿ. ಅಡಿಯ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-19 ಎಂದು ಗುರುತಿಸಲಾಗಿದ್ದು, **ನಿಪಿ-19 ರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು.**

26. **ಈಗ ಸದರಿ ಪ್ರಾಸಾ-11 ರವರ ಕಲಂ 164 ಸಿ.ಆರ್.ಪಿ.ಸಿ. ಅಡಿಯ ಹೇಳಿಕೆಯನ್ನು ನೋಡುತ್ತಿದ್ದು, ಅದನ್ನು ನಿಪಿ-35 ಎಂದು ಮತ್ತು ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು.**

27. ನಂತರ ಅದೇ ದಿನ, ಪಿಸಿ 401 ರವರು ಆರ್.ಎಫ್.ಎಸ್.ಎಲ್. ಬೆಳಗಾವಿ ಇವರಿಂದ ಪಡೆದ ಸ್ವೀಕೃತಿಯನ್ನು ತಂದು ಹಾಜರಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. **ಈಗ**

**ಸದರಿ ಸ್ವೀಕೃತಿಯನ್ನು ನೋಡುತ್ತಿದ್ದು, ಅದನ್ನು ನಿಪಿ-36 ಎಂದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-36(ಎ) ಎಂದು ಗುರುತಿಸಲಾಯಿತು.** ನಂತರ ಪಿಸಿ 401 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

28. ದಿಃ 18.04.2022 ರಂದು, ಘಟನೆ ನಡೆದ ಸಮಯದಲ್ಲಿ ವಿದ್ಯುತ ಸರಬರಾಜು ಇರುವ ಬಗ್ಗೆ ಮಾಹಿತಿ ಪೂರೈಸುವಂತೆ ಹೆಸ್ಕಾಂ ಅಧಿಕಾರಿಗಳಿಗೆ ಪತ್ರವನ್ನು ಬರೆದಿರುತ್ತೇನೆ.

29. ದಿಃ 05.05.2022 ರಂದು, ಹೆಸ್ಕಾಂ ಅಧಿಕಾರಿಗಳು ಘಟನೆ ನಡೆದ ಸಮಯದಲ್ಲಿ ವಿದ್ಯುತ ಸರಬರಾಜು ಇರುವ ಬಗ್ಗೆ ಮಾಹಿತಿ ಪೂರೈಸಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈಗ ಸದರಿ ಮಾಹಿತಿಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-28 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ್ವೀಕೃತಿ ಸಹಿಯನ್ನು ನಿಪಿ-28(ಬಿ) ಎಂದು ಗುರುತಿಸಲಾಯಿತು.**

30. ನಂತರ ಅದೇ ದಿನ ಪಿಡಬ್ಲುಡಿಯವರ ಕೊಟ್ಟ ಗುನ್ನಾ ಸ್ಥಳದ ನಕಾಶೆಯನ್ನು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಈಗ ಸದರಿ ನಕಾಶೆಯನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿರುತ್ತದೆ. ನಿಪಿ-26 ರ ಕವರಿಂಗ ಲೆಟರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-27 ಎಂದು ಗುರುತಿಸಲಾಗಿರುತ್ತದೆ. ನಿಪಿ-27 ರ **ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-27(ಬಿ) ಎಂದು ಗುರುತಿಸಲಾಯಿತು.**

31. ಆರ್.ಎಫ್.ಎಸ್.ಎಲ್. ಬೆಳಗಾವಿ ಇವರಿಂದ ಬರುವ ಪ್ರಮಾಣ ಪತ್ರವನ್ನು ಬಾಕಿ ಇಟ್ಟು, ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿರುತ್ತೇನೆ.

32. ದಿಃ 07.07.2022 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ.

33. ದಿಃ 08.07.2022 ರಂದು ಸದರಿ FSL ವರದಿಯನ್ನು ಮತ್ತು ಮು.ಮಾ.6 ನ್ನು ಜಿಮ್ಸ ವೈದ್ಯರಿಗೆ ಕಳಿಸಿ, ಅಂತಿಮ ಅಭಿಪ್ರಾಯ ಕೊಡುವಂತೆ ಕೋರಿಕೆ ಪತ್ರವನ್ನು ಬರೆದಿರುತ್ತೇನೆ. ದಿಃ 14.07.2022 ರಂದು ಸದರಿ ವೈದ್ಯರು ತಮ್ಮ ಅಂತಿಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಈಗ ಸದರಿ ಅಂತಿಮ ಅಭಿಪ್ರಾಯವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದ್ದು, **ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು.**

34. ದಿಃ 15.07.2022 ರಂದು FSL ವರದಿಯನ್ನು ಮತ್ತು ನಿಪಿ-24 ನ್ನು ನ್ಯಾಯಾಲಯಕ್ಕೆ ಕಳಿಸಿಕೊಟ್ಟಿರುತ್ತೇನೆ. **ಈಗ FSL ವರದಿಯನ್ನು ನೋಡುತ್ತಿದ್ದು, ಅದನ್ನು ನಿಪಿ-37 ಎಂದು, ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-37(ಎ) ಎಂದು ಗುರುತಿಸಲಾಯಿತು.**

35. ಈ ಪ್ರಕರಣದಲ್ಲಿ ಹಾಜರಪಡಿಸಿದ ಸಿ.ಡಿ. ಮತ್ತು ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸದರಿ ಸಿ.ಡಿ.ಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-21 ಎಂದು

ಗುರುತಿಸಲಾಗಿರುತ್ತದೆ. ಈಗ ಸದರಿ ಪ್ರಮಾಣ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿರುತ್ತದೆ. **ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು.**

**ಪಾಟಿ ಸವಾಲುಃ ಶ್ರೀ ಎಸ್.ವಿ. ಗ್ರಾಮಪುರೋಹಿತ, ಆರೋಪಿ ಪರ (CLADC) ವಕೀಲರಿಂದಃ**

**(ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ, ಪಾಟಿ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**